ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. Ambedkar Veedhi, Bengaluru - 560 001.
Ph. No: 080 –22961016/ E-Mail ID: registrarbcu@gmail.com

ಸಂಖ್ಯೆ.ಬೆಂ.ಕೇ.ವಿ/ಪ.ವಿ/2019-20 | 429 ದಿನಾಂಕ:05.02.2020

# ಸುತ್ತೋಲೆ

**ವಿಷಯ: ಪರೀಕ್ಷಾ ಕೇಂದ್ರಗಳಲ್ಲಿ ಉತ್ತರ ಪತ್ರಿಕೆಗಳು ಮತ್ತು OMR ಗಳ ಸ್ವೀಕಾರ ಮತ್ತು ಪ್ಯಾಕೇಟ್ ಮಾಡುವ ಮೊದಲು ಕೂಲಂಕಷವಾಗಿ ಪರಿಶೀಲನೆ ಮಾಡುವ ಬಗ್ಗೆ.**

ಉಲ್ಲೇಖ: 1. ವಿಶೇಷ ಸಿಂಡಿಕೇಟ್ ಸಭೆ ನಿರ್ಣಯ ದಿನಾಂಕ 10.01.2020.
2. ಕುಲಪತಿಯವರ ಅನುಮೋದನೆ ದಿನಾಂಕ 31.01.2020

*****

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ವ್ಯಾಪ್ತಿಗೆ ಬರುವ ಕೆಲವು ಕಾಲೇಜುಗಳ ಪರೀಕ್ಷಾ ಕೇಂದ್ರಗಳಲ್ಲಿ, ಪರೀಕ್ಷಾ ದಿನಗಳಂದು ಪರೀಕ್ಷೆ ಬರೆದ ವಿದ್ಯಾರ್ಥಿಗಳಿಂದ ಸ್ವೀಕರಿಸುವ ಉತ್ತರ ಪತ್ರಿಕೆಗಳು ಮತ್ತು OMR ಶೀಟುಗಳನ್ನು ಪರಿಶೀಲಿಸಿ ಪಡೆದ ನಂತರ ಪ್ಯಾಕೇಟ್ ಮಾಡುವ ಕ್ರಮವನ್ನು ಅನುಸರಿಸುವುದು ಸೂಕ್ತ. ಆದರೆ, ಕೆಲವು ಕಾಲೇಜುಗಳು ಬ್ಯಾಗಿನಲ್ಲಿ ಇಟ್ಟಿರುವ ಉತ್ತರ ಪತ್ರಿಕೆಗಳು ಮತ್ತು OMR ಸಂಖ್ಯೆಗಳಿಗೂ ಬ್ಯಾಗಿನ ಮೇಲೆ ನಮೂದಿಸಿರುವ ಸಂಖ್ಯೆಗೂ ಹೊಂದಾಣಿಕೆಯಾಗದಿರುವುದು ತಿಳಿದುಬಂದಿರುತ್ತದೆ. ಇದರಿಂದ ಮೌಲ್ಯಮಾಪನ ಸಂದರ್ಭದಲ್ಲಿ ಬಹಳ ಅನಾನುಕೂಲವಾಗುತ್ತಿದ್ದು, ವಿಶ್ವವಿದ್ಯಾಲಯ ಮತ್ತು ವಿದ್ಯಾರ್ಥಿ ಇಬ್ಬರಿಗೂ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸಲು ಎಲ್ಲಾ ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರುಗಳು ಹೆಚ್ಚು ಗಮನ ನೀಡಿ ಪರೀಕ್ಷಾ ಕೇಂದ್ರಗಳಲ್ಲಿ ಉತ್ತರ ಪತ್ರಿಕೆಗಳು ಮತ್ತು OMR ಗಳ ಸ್ವೀಕಾರ ಮತ್ತು ಪ್ಯಾಕೇಟ್ ಮಾಡುವ ಮೊದಲು ಕೂಲಂಕಷವಾಗಿ ಪರಿಶೀಲನೆ ಮಾಡುವಂತೆ ಕೋರಲಾಗಿದೆ.

ಎಲ್ಲಾ ಕಾಲೇಜುಗಳು ಪರೀಕ್ಷಾ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿ ಅಲ್ಲಿ CCTVಯನ್ನು ಅಳವಡಿಸಿಕೊಳ್ಳಲು ಮಹಾವಿದ್ಯಾಲಯಗಳು ಅಗತ್ಯ ಕ್ರಮ ಕೈಕೊಳ್ಳಬೇಕೆಂದು ಸೂಚಿಸಿದೆ.

ಒಂದು ವೇಳೆ ಯಾವ ವಿದ್ಯಾರ್ಥಿಯ ಉತ್ತರ ಪತ್ರಿಕೆ ಅಥವಾ OMR ಕಳೆದು ಹೋದರೆ ಅಥವಾ ಅದಲು ಬದಲು ಮಾಡಿ ಬೇರೆ ಬ್ಯಾಗುಗಳಲ್ಲಿ ಹಾಕಿದರೆ ಇದರಿಂದಾಗುವ ಅನಾನುಕೂಲಗಳಿಗೆ ಸಂಭಂದಪಟ್ಟ ಕಾಲೇಜಿನ ಪ್ರಾಂಶುಪಾಲರು / ಮುಖ್ಯ ಪರೀಕ್ಷಾ ವ್ಯವಸ್ಥಾಪಕರನ್ನೇ ಹೊಣೆಗಾರರನ್ನಾಗಿ ಮಾಡಿ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸಲಾಗುವುದೆಂದು ತಿಳಿಸಲು ಮಾನ್ಯ ಕುಲಪತಿಗಳಿಂದ ನಿರ್ದೇಶಿತನಾಗಿದ್ದೇನೆ.

**ಕುಲಸಚಿವರು(ಮೌಲ್ಯಮಾಪನ)**

**ಗೆ,**

1. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸಂಯೋಜನೆ ಹೊಂದಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ/ ಕೋ-ಆರ್ಡಿನೇಟರುಗಳಿಗೆ.

**ಪ್ರತಿಗಳು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
2. ಕುಲಪತಿ/ ಕುಲಸಚಿವ/ವಿತ್ತಾಧಿಕಾರಿಗಳ ವಿಶೇಷಾಧಿಕಾರಿಗಳು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು.
3. ವೆಬ್‌ಸೈಟ್ ನಿರ್ವಾಹಕರು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು- ಈ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟಿನಲ್ಲಿ ಅಪ್ಲೋಡ್ ಮಾಡಲು ತಿಳಿಸಿದೆ.